1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**3009/2024**

ಹೆಸರುಃ ಕುಮಾರಪ್ಪ ಚಾಸಾಃ 1

ತಂದೆಯ ಹೆಸರುಃ ಪರಮೇಶ್ವರಪ್ಪ ಪ್ರಾಸಾ: 1

ವಯಸ್ಸುಃ 45 ವರ್ಷ

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ಮುಗಿಲೇಹಳ್ಳಿ ಗ್ರಾಮ, ಚನ್ನಗಿರಿ ತಾಃ

ಸಾಕ್ಷಿಗೆ ದಿನಾಂಕಃ 18-02-2026 ರಂದು ಪ್ರಮಾಣ ವಚನ ಭೋಧಿಸಲಾಯಿತು .

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಮೃತ ಪರಮೇಶ್ವರಪ್ಪ ನನ್ನ ತಂದೆ.

ಸುಮಾರು 3 ವರ್ಷಗಳ ಹಿಂದೆ ನನ್ನತಂದೆಗೆ ಅಪಘಾತವಾಗಿದ್ದು ಸದರಿ ಅಪಘಾತ ಹೇಗೆ , ಯಾರಿಂದ , ಯಾವ ರೀತಿ ಆಯಿತು ಎಂದು ನನಗೆ ಗೊತ್ತಿಲ್ಲ. ಸದರಿಯವರನ್ನು ನಾನು ಚನ್ನಗಿರಿ ಆಸ್ಪತ್ರೆಯ ಶವಾಗಾರದಲ್ಲಿ ನೋಡಿರುತ್ತೇನೆ.

ನಾನು ಅಸ್ಪತ್ರೆಯಲ್ಲಿರುವಾಗ ಪೊಲೀಸರು ಕೆಲವು ದಾಖಲೆಗಳ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಯಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ದೂರಾಗಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ಅದನ್ನು ಯಾರು, ಎಲ್ಲಿ , ಯಾವಾಗ, ಯಾವ ಕಾರಣಕ್ಕಾಗಿ ಬರೆದರು ಎಂದು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ದಾಖಲೆಯಲ್ಲಿ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಕೃತ್ಯ ನಡೆದ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ಸರಿದ ದಾಖಲೆಗೆ ನನ್ನೊಂದಿಗೆ ಬೇರೆ ಯಾರು ಸಹಿ

ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.  ಅದನ್ನು ಯಾರು, ಎಲ್ಲಿ , ಯಾವಾಗ, ಯಾವ ಕಾರಣಕ್ಕಾಗಿ ಬರೆದರು ಎಂದು ನನಗೆ ಗೊತ್ತಿಲ್ಲ. ಆರೋಪಿಯನ್ನು ನಾನು ನೋಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ದೂರು ಮತ್ತು ಪಂಚನಾಮೆಗೆ   ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು ಮತ್ತು ಪಂಚನಾಮೆಗೆ ನೋಡಲಾಗಿ ಸಾಕ್ಷಿಯು  ದೂರು ಮತ್ತು ಪಂಚನಾಮೆಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ   ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು  ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 10-04-2023 ರಂದು ಆರೋಪಿಯ ಬಾಬ್ತಾದ ಕೆಎ-17/ಪಿ-1605 ಮಾರುತಿ ವ್ಯಾನ್ ನಲ್ಲಿ ಕೆಲಸದ ನಿಮಿತ್ತ ಭದ್ರಾವತಿಗೆ ಹೋಗಿ ಮುಗಿಲೆಹಳ್ಳಿಗೆ ಹಿಂದಿರುಗುತ್ತಿರುವಾಗ ಭದ್ರಾವತಿ ಉಬ್ರಾಣಿ ರಸ್ತೆ ಬಳಿಇ ರುವ ಆನೇ ಗೇಟ್ ಬಳಿ ಇರುವ ನೀರಿನ ಟ್ಯಾಂಕ್ ಹತ್ತಿರ ಆರೋಪಿ ತನ್ನ ವಾಹನವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ ಕಾರಣ ಮದ್ಯಾಹ್ನ 3.30ರ ಸಮಯಕ್ಕೆ ಚಾಲಕನ ನಿಯಂತ್ರಣ ತಪ್ಪಿದ ವಾಹನ ರಸ್ತೆಯ ಪಕ್ಕೆಯ ಇಕ್ಕೆಲಕ್ಕೆ ಪಲ್ಟಿ ಹೊಡೆದು  ಮರಕ್ಕೆ ಡಿಕ್ಕಿ ಹೊಡೆದಿದ್ದರಿಂದ ಸದರಿ ಓಮಿನಿ ವಾಹನದಲ್ಲಿ ಪ್ರಯಾಣಿಸುತ್ತಿದ್ದ ನನ್ನ ತಂದೆಯಾದ ಪರಮೇಶ್ವರಪ್ಪನ ಮೈ ಕೈ ಗೆ ತಲೆಗೆ ತೀವ್ರ ಸ್ವರೂಪದ ಪೆಟ್ಟುಗಳಾಗಿದ್ದು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ಚಾಸಾ-12 ರವರು ನನಗೆ ಫೋನ್ ಮಾಡಿ ತಿಳಿಸಿದ್ದು ನಂತರ ನಾನು ಮತ್ತು ಚಾಸಾ-13 ರವರು ಸ್ಥಳಕ್ಕೆ ಹೋಗಿ ನೋಡಿದಾಗ ನನ್ನ ತಂದೆ ಮೃತಪಟ್ಟಿರುವುದು ಗೊತ್ತಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಾಹನದ ಚಾಲಕನಾದ ಆರೋಪಿಗೂ ಸಹ ಸಣ್ಣ ಪುಟ್ಟ ಗಾಯಗಳಾಗಿದ್ದು ವ್ಯಾನ್ ಜಖಂಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.  ಸದರಿ ಅಪಘಾತದ ವಿಚಾರವಾಗಿ ನಾನು ಆರೋಪಿಯ ವಿರುದ್ದ ಕಾನೂನು ಕ್ರಮ ಕೈಗೊಳ್ಳುವಂತೆ ಠಾಣೆಗೆ ಹಾಜರಾಗಿ ನಿಪಿ-1 ರಂತೆ ದೂರನ್ನು ದಾಖ್ಲಿಸಿದ್ದೆ ಎಂದರೆ ಸರಿಯಲ್ಲ.

ನಿಪಿ-1ರ ಹಿನ್ನೆಲೆಯಿಲ್ಲಿ ದಿಃ 11-04-2023 ರಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ-6 ಮತ್ತು 7 ರವರ ಸಮಕ್ಷಮ ಬೆಳಿಗ್ಗೆ 10.30 ರಿಂದ 11.30ರವರೆಗೂ ನಿಪಿ-2 ರಂತೆ ಪಂಚನಾಮೆ ಜರುಗಿಸಿ ಅದಕ್ಕೆ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ – ಇರುವುದಿಲ್ಲ.**

**ಮರು ವಿಚಾರಣೆಃ ಇರುವುದಿಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**